ಕರ್ನಾಟಕ ಸರ್ಕಾರ                                                                 ಸಿಆರ್‌ಪಿ.67

ಹೇಳಿಕೆ ಹಾಳೆ
ಆರ್‌ಪಿ.ಸಂ.57
ನಮೂನೆ ಸಂ.4
(ಸಿವಿಲ್)

**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**(ಎಂ.ಎ.ಸಿ.ಟಿ.) ಕುಂದಾಪುರ.**

**ಎಂ. ವಿ. ಸಿ. ಸಂಖ್ಯೆಃ 985-2015          ಪಿ ಡಬ್ಲ್ಯೂಃ4**

| | |
|---|---|
| **ಸಾಕ್ಷಿದಾರರ ಹೆಸರು** | ಃ ಡಾ. ಗಿರೀಶ್ ಮೆನನ್ |
| **ತಂದೆ ಹೆಸರು** | ಃ ರಾಮಚಂದ್ರ ಮೆನನ್ |
| **ವಯಸ್ಸು** | ಃ 53 ವರ್ಷ |
| **ವೃತ್ತಿ** | ಃ ನ್ಯೂರೊಸರ್ಜನ್, ಡಿಪಾರ್ಟಮೆಂಟ್ ಆಫ್ ನ್ಯೂರೊಸರ್ಜರಿ, ಕೆಎಂಸಿ, ಮಣಿಪಾಲ |
| **ವಾಸ** | ಃ ಮಣಿಪಾಲ |

**ದಿಃ 09-02-2021 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ-** ಶ್ರೀ ಕೆ.ಪಿ.ಎಸ್. ರವರಿಂದ

2014 ಡಿಸೆಂಬರ್ ನಿಂದ ನಾನು ಮಣಿಪಾಲ ಕೆಎಂಸಿ ಆಸ್ಪತ್ರೆಯಲ್ಲಿ ನ್ಯೂರೊಸರ್ಜರಿ ವಿಭಾಗದ ವಿಭಾಗ ಮುಖ್ಯಸ್ಥನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈ ಪ್ರಕರಣದ ಅರ್ಜಿದಾರ ನಿತೇಶ ಎನ್ನುವವ ಮಣಿಪಾಲ ಕೆಎಂಸಿ ಆಸ್ಪತ್ರೆಯಲ್ಲಿ ನನ್ನ ವಿಭಾಗದಲ್ಲಿ ಚಿಕಿತ್ಸೆಗಾಗಿ ಬಂದಿದ್ದು ನಾನು ಆತನಿಗೆ ಚಿಕಿತ್ಸೆ ನೀಡಿದ್ದೇನೆ. ಆತನಿಗೆ ಮೋಟಾರು ವಾಹನ ಅಪಘಾತದಲ್ಲಿ ತಲೆಗೆ ಗಾಯವಾಗಿತ್ತು. ಆತನಿಗೆ ನಾನು ಮತ್ತು ನನ್ನ ವಿಭಾಗದ ಇತರ ವೈದ್ಯರು ಸೇರಿ ಗಾಯಾಳುವಿಗೆ ಚಿಕಿತ್ಸೆ ನೀಡಿದ್ದೇವೆ. ಈಗ ತೋರಿಸಿದ ನಿಪಿ-8 ಗಾಯಾಳುವಿಗೆ ಸಂಬಂಧಿಸಿ ನಾವು ಕೊಟ್ಟ ಡಿಸ್ಚಾರ್ಜ ಸಮರಿ ಆಗಿದೆ.

ನಮ್ಮ ಬಳಿ ತಲೆಗೆ ಸಂಬಂಧಿಸಿ ಚಿಕಿತ್ಸೆ ಪಡೆದ ಗಾಯಾಳು ಅನುಪಾಲನಾ ಚಿಕಿತ್ಸೆಗಾಗಿ ನಮ್ಮಲ್ಲಿಗೆ ಬಂದಾಗ ಮೇಲ್ನೋಟಕ್ಕೆ ಕಾಣುವಂತಹ ಯಾವುದೇ ತೊಂದರೆಗಳು ನಮಗೆ ಕಂಡು ಬಾರದೇ ಇದ್ದು ಗಾಯಾಳು ತನಗೆ ನೆನಪಿನ ಶಕ್ತಿ ಕಡಿಮೆಯಾಗಿದೆ ಕಾಗ್ನಿಟಿವ್ ಫ್ಯಾಕಲ್ಟಿ ಸರಿಯಾಗಿ ಕೆಲಸ ಮಾಡುತ್ತಿಲ್ಲ ಮುಂತಾದ

ತೊಂದರೆಗಳಿವೆ ಎಂದು ನಮ್ಮ ಬಳಿ ಹೇಳಿದಾಗ ನಾವು ಅವರನ್ನು ಮಾನಸಿಕ ತಜ್ಞರ ಬಳಿ ನ್ಯೂನ್ಯತೆ ಪರಿಶೀಲಿಸುವ ಬಗ್ಗೆ ಕಳಿಸುತ್ತೇವೆ. ಈ ಪ್ರಕರಣದಲ್ಲಿ ಕಾಗ್ನಿಟಿವ್ ಡಿಸ್ಎಬಿಲಿಟಿಯನ್ನು ಮಾನಸಿಕ ಚಿಕಿತ್ಸಾ ವಿಭಾಗದವರು ಪರೀಕ್ಷೆ ಮಾಡಿದ್ದಾರೆ. ದೊಡ್ಡ ಪ್ರಮಾಣದ ಕಾಗ್ನಿಟಿವ್ ಡಿಸ್ಎಬಿಲಿಟಿ ಇದ್ದಲ್ಲಿ ನಾವೇ ಅದನ್ನು ಪರಿಶೀಲನೆ ಮಾಡುತ್ತೇವೆ. ಅದು ಸಣ್ಣ ಪ್ರಮಾಣದಲ್ಲಿದ್ದು ನಮ್ಮ ಬಳಿ ಅದನ್ನು ಪರೀಕ್ಷೆ ಮಾಡಲು ಅವಕಾಶವಿಲ್ಲದಿದ್ದ ಸಂದರ್ಭದಲ್ಲಿ ಮಾನಸಿಕ ತಜ್ಞರ ಬಳಿ ಕಳಿಸುತ್ತೇವೆ. ನಾನು ಈ ಗಾಯಾಳುವಿಗೆ ಸಂಬಂಧಿಸಿದ ಚಿಕಿತ್ಸಾ ಕಡತವನ್ನು ಪರಿಶೀಲನೆ ಮಾಡಿದ್ದು ಮಾನಸಿಕ ಚಿಕಿತ್ಸಾ ವಿಭಾಗದವರು ಅವಶ್ಯವುಳ್ಳ ಎಲ್ಲ ಪರೀಕ್ಷೆ ಮಾಡಿ ನ್ಯೂನ್ಯತಾ ಪ್ರಮಣ ಪತ್ರವನ್ನು ಕೊಟ್ಟಿದ್ದಾರೆ. ಅವರು ಅಂತಹ ಪರೀಕ್ಷೆ ಮಾಡಲು ಅರ್ಹತೆಯುಳ್ಳವರಾಗಿದ್ದಾರೆ.

<u>**ಪಾಟೀ ಸವಾಲುಃ**</u> ಶ್ರೀ ಎನ್.ವಿ.ಆರ್. ಅವರಿಂದ

ಗಾಯಾಳು ನಮ್ಮಲ್ಲಿ ದಾಖಲಾಗುವ ಸಮಯದಲ್ಲಿ ನಾನು ಹಾಜರಿದ್ದೆ. ನಮ್ಮ ವಿಭಾಗದವರಾಗಲಿ ನಾನಾಗಲಿ ನ್ಯೂನ್ಯತಾ ಪ್ರಮಾಣ ಪತ್ರವನ್ನು ಕೊಟ್ಟಿರುವುದಿಲ್ಲ. ಮೆಡಿಕಲ್ ಫೈಲ್ ಪ್ರಕಾರ ನಮ್ಮ ವಿಭಾಗದಿಂದ ಗಾಯಾಳುವಿನ ಮಾನಸಿಕ ನ್ಯೂನ್ಯತೆ ಪರೀಕ್ಷೆಯ ಬಗ್ಗೆ ಮಾನಸಿಕ ಚಿಕಿತ್ಸಾ ವಿಭಾಗಕ್ಕೆ ಕಳುಹಿಸಿದ ಬಗ್ಗೆ ನಮೂದು ಇಲ್ಲ ಎನ್ನುವುದು ಸರಿ. ದಾಖಲೆಗಳ ಪ್ರಕಾರ ಗಾಯಾಳು ನ್ಯೂನ್ಯತಾ ಪ್ರಮಾಣ ಪತ್ರವನ್ನು ಪಡೆಯುವ ಬಗ್ಗೆ ನಮ್ಮ ವಿಭಾಗಕ್ಕೆ ಬಂದಿಲ್ಲ ಎನ್ನುವುದು ಸರಿ. ಕಳೆದ 5 ವರ್ಷಗಳಿಂದ ನಾನು ಗಾಯಾಳುವನ್ನು ನೋಡಿಲ್ಲ ಎನ್ನುವುದು ಸರಿ. ಆತನನ್ನು ನೋಡಿರದೇ ಇದ್ದ ಕಾರಣ ಆತನನ್ನು ಈಗ ನೋಡದೇ ಆತನ ಮಾನಸಿಕ ತೊಂದರೆಗಳ ಬಗ್ಗೆ ಮತ್ತು ನ್ಯೂನ್ಯತೆಯ ಬಗ್ಗೆ ಏನನ್ನೂ ಹೇಳಲು ನನಗೆ ಆಗುವುದಿಲ್ಲ ಎನ್ನುವುದು ಸರಿ. ನಾನು ಗಾಯಾಳುವನ್ನು ಪರೀಕ್ಷೆ ಮಾಡದಿದ್ದ ಕಾರಣ, ನಾನು ನ್ಯೂನ್ಯತೆಯ ಪರೀಕ್ಷೆ ಮಾಡದೇ ಇದ್ದ ಕಾರಣ ಬೇರೊಬ್ಬ ವೈದ್ಯರು ಕೊಟ್ಟ ನ್ಯೂನ್ಯತೆಯ ಪ್ರಮಾಣ ಪತ್ರದ ಸತ್ಯಾಸತ್ಯತೆಯ ಬಗ್ಗೆ ನನಗೆ ಹೇಳಲು ಆಗುವುದಿಲ್ಲ ಎನ್ನುವುದು ಸರಿ. ನನ್ನ ಮಾರ್ಗದರ್ಶನದ ಪ್ರಕಾರ ನನ್ನ ವಿಭಾಗದ ಕಿರಿಯ ವೈದ್ಯರು ಗಾಯಾಳುವಿಗೆ ಚಿಕಿತ್ಸೆ

ಕೊಟ್ಟಿದ್ದಾರೆ. ಮೆಡಿಕಲ್ ಫೈಲ್ ಪ್ರಕಾರ ಗಾಯಾಳುವಿಗೆ ನಾನು ವೈಯಕ್ತಿಕವಾಗಿ ಯಾವುದೇ ಔಷಧಿಯ ಅಥವಾ ಚಿಕಿತ್ಸೆಯ ಸಲಹೆ ಕೊಟ್ಟಿಲ್ಲ ಆದರೆ ನಮ್ಮ ಟೀಮ್‌ನ ವೈದ್ಯರು ಕೊಟ್ಟಿದ್ದಾರೆ. ಗಾಯಾಳುವಿಗೆ ಕಾಗ್ನಿಟಿವ್ ಡಿಸ್‌ಎಬಿಲಿಟಿ ಇತ್ತೋ ಇಲ್ಲವೋ ಎಂದು ನಾನು ಆತನನ್ನು ನೋಡದೇ ಇದ್ದ ಕಾರಣ ಹೇಳಲು ಆಗುವುದಿಲ್ಲ. ಮೆಡಿಕಲ್ ಫೈಲ್ ಪ್ರಕಾರ ಗಾಯಾಳು ದಿನಾಂಕ **25-07-2018** ರಂದು ನೇರವಾಗಿ ಮಾನಸಿಕ ವಿಭಾಗದ ವೈದ್ಯರನ್ನು ಸಂಪರ್ಕಿಸಿದ್ದಾನೆ ಎನ್ನುವುದು ಸರಿ. ನನಗೆ ಪಿಡಬ್ಲ್ಯೂ - **3** ಡಾ. ಸಮೀರ್ ಅವರ ಪರಿಚಯ ಇದೆ. ಕಡತದ ಪ್ರಕಾರ ಕಳೆದ **5** ವರ್ಷಗಳಿಂದ ಗಾಯಾಳು ನಮ್ಮ ವಿಭಾಗಕ್ಕೆ ಯಾವುದೇ ಚಿಕಿತ್ಸೆಯ ಬಗ್ಗೆ ಬಂದಿಲ್ಲ. ಗಾಯಾಳುವಿಗೆ ನಮ್ಮ ವಿಭಾಗಕ್ಕೆ ಸಂಬಂಧಿಸಿದ ತೊಂದರೆಗಳಿದ್ದಲ್ಲಿ ನಮ್ಮಲ್ಲಿಗೆ ಬಂದು ಚಿಕಿತ್ಸೆ ಪಡೆಯುತ್ತಿದ್ದ ಎನ್ನುವುದು ಸರಿ. ಡಾ. ಸಮೀರ್ ಅವರು ಗಾಯಾಳುವಿಗೆ ಅವರ ವಿಭಾಗದಲ್ಲಿ ಪರೀಕ್ಷೆ ಮಾಡಿದ ನಂತರ ನಮ್ಮ ವಿಭಾಗಕ್ಕೆ ಚಿಕಿತ್ಸೆ ಬಗ್ಗೆ ಆತನನ್ನು ಕಳಿಸಿಲ್ಲ. ವೈದ್ಯಕೀಯ ಕಡತದ ಪ್ರಕಾರ ಗಾಯಾಳುವನ್ನು ನಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆತಂದಾಗ ಆತ ಮದ್ಯಪಾನ ಮಾಡಿದ ಬಗ್ಗೆ ಕಂಡು ಬಂದಿತ್ತು ಎನ್ನುವುದು ಸರಿ. ಗಾಯಾಳು ನಮ್ಮ ವಿಭಾಗಲ್ಲಿ ಚಿಕಿತ್ಸೆ ಪಡೆದಿಲ್ಲ ಎನ್ನುವುದು ಆತ ನಮ್ಮ ವಿಭಾಗದ ಮೇಲ್ವಿಚಾರಣೆಯಲ್ಲಿ ಮಾತ್ರ ಇದ್ದ ಎನ್ನುವುದು ಸರಿ ಅಲ್ಲ. ಗಾಯಾಳುವಿಗೆ ನಮ್ಮ ವಿಭಾಗದಲ್ಲಿ ಸಾಂಪ್ರದಾಯಿಕ ಚಿಕಿತ್ಸೆ ನೀಡಲಾಗಿದೆ ಮತ್ತು ಯಾವುದೇ ಸರ್ಜರಿ ಮಾಡಿಲ್ಲ ಎನ್ನುವುದು ಸರಿ. ಗಾಯಾಳು ಆಸ್ಪತ್ರೆಯಲ್ಲಿ ಇದ್ದ ಅವಧಿಯಲ್ಲಿ ಆತನಿಗೆ ಮೈನಡುಕ ಬಂದಿರಲಿಲ್ಲ ಎನ್ನುವುದು ಸರಿ. ವೈದ್ಯಕೀಯ ಕಡತದ ಪ್ರಕಾರ ಆತನಿಗೆ ದೊಡ್ಡ ಪ್ರಮಾಣದ ಮಾನಸಿಕ ತೊಂದರೆ ಇರಲಿಲ್ಲ.

ನಮ್ಮ ಆಸ್ಪತ್ರೆಯಲ್ಲಿಯ ಡಾ. ಸಮೀರ್ ಅವರು ಯಾವುದೇ ದೈಹಿಕ ನ್ಯೂನ್ಯತೆ ಇಲ್ಲದೇ ಇದ್ದರೂ ಸಹ ಅಂತಹ ವ್ಯಕ್ತಿಗಳಿಗೆ ದೈಹಿಕ ನ್ಯೂನ್ಯತೆ ಇದೆ ಎಂಬ ಪ್ರಮಾಣ ಪತ್ರವನ್ನು ಕೊಡುವಂತಹ ವೈದ್ಯರು ಎನ್ನುವುದು ಸರಿ ಅಲ್ಲ. ಈ ಪ್ರಕರಣದಲ್ಲಿ ಕೂಡ ಆತ ಅದೇ ರೀತಿ ಗಾಯಾಳುವಿಗೆ ಯಾವುದೇ ನ್ಯೂನ್ಯತೆ ಇಲ್ಲದೇ ಇದ್ದರೂ ಸಹ ನ್ಯೂನ್ಯತಾ ಪ್ರಮಾಣ ಪತ್ರ ಕೊಟ್ಟಿದ್ದಾರೆ ಎಂದು ಸೂಚಿಸುವುದು ಸರಿ ಅಲ್ಲ. ಆತ ನನ್ನ ಸ್ನೇಹಿತನಾದ ಕಾರಣ ಆತ ಒಳ್ಳೆಯ ವೈದ್ಯ ಎಂದು ಹೇಳುತ್ತಿದ್ದೇನೆ ಎನ್ನುವುದು ಸರಿ

ಅಲ್ಲ. ನಮ್ಮ ವಿಭಾಗದಿಂದ ಗಾಯಾಳುವನ್ನು ಮಾನಸಿಕ ಚಿಕಿತ್ಸಾ ವಿಭಾಗಕ್ಕೆ ಕಳಿಸದೇ ಇದ್ದ ಕಾರಣ ಸದ್ರಿ ವಿಭಾಗದವರು ಕೊಟ್ಟ ನ್ಯೂನ್ಯತಾ ಪ್ರಮಣಾ ಪತ್ರಕ್ಕೆ ಯಾವುದೇ ಬೆಲೆ ಇಲ್ಲ ಎನ್ನುವುದು ಸರಿ ಅಲ್ಲ.

**ಮರು ವಿಚಾರಣೆಃ** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾ.**
**(ಎಂ.ಎ.ಸಿ.ಟಿ.) ಕುಂದಾಪುರ**